**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 499/2023
ಸಿ.ಡಬ್ಲ್ಯೂಃ 11
ಪಿ.ಡಬ್ಲ್ಯೂಃ 8

ಸಾಕ್ಷಿದಾರರ ಹೆಸರುಃ ಶ್ರೀ. ಸುಬ್ರಹ್ಮಣ್ಯ ಹೆಚ್

ತಂದೆಯ ಹೆಸರುಃ ಶ್ರೀ. ರಾಮ

ವಯಸ್ಸುಃ 28 ವರ್ಷ

ಉದ್ಯೋಗಃ ಪಿಎಸ್‌ಐ , ಕರಾವಳಿ ಕಾವಲು ಪಡೆ , ಗಂಗೋಳ್ಳಿ

ವಾಸಸ್ಥಳಃ ಬಿಜೂರು, ಬೈಂದೂರು ತಾಲೂಕು

ದಿನಾಂಕ 09-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 01-03-2023 ರಿಂದ ದಿನಂಾಕ 17-08-2023 ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪೊಲೀಸು ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 06-04-2023 ರಂದು ಚಾ.ಸಾ.10 ರವರಿಂದ ಪ್ರಕರಣದ ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಚಾ.ಸಾ.1 ರವರ ಗಾಯದ ಪ್ರಮಾಣಪತ್ರವನ್ನು ಚಾ.ಸಾ.6 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ.8 ರವರಿಂದ ತಕ್ಷೀರು ನಡೆದ ಸ್ಥಳದ RTC ಯನ್ನು ಪತ್ರದ ಮೂಲಕ ಪಡೆದಿದ್ದೇನೆ. ಅದೇ ದಿನ ತನಿಖೆ ಪೂರೈಸಿ ಮಾನ್ಯ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

3. ಗಾಯದ ಪ್ರಮಾಣಪತ್ರ, ತಹಶೀಲ್ದಾರ್ ರವರು ನೀಡಿದ ಪತ್ರ ಮತ್ತು RTC ಯನ್ನು ನೋಡಿದರೆ ಗುರುತಿಸುತ್ತೇನೆ. ಗಾಯದ ಪ್ರಮಾಣತಪತ್ರವನ್ನು ಈಗಾಗಲೇ ನಿ,ಪಿ.8 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಚಾ.ಸಾ.8 ರವರು ನೀಡಿದ ಪತ್ರವನ್ನು ನಿ.ಪಿ.10 ಎಂದು, ಅದರ

ಜೊತೆ ಇರುವ RTC ಯನ್ನು ನಿ.ಪಿ.11 ಎಂದು ಹಾಗೂ ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿ.ಪಿ.10(ಎ) ಮತ್ತು ನಿ.ಪಿ.11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಹೆಚ್. ವಕೀಲರಿಂದಃ**

4. ದಿನಾಂಕ 09-12-2022 ರಂದು ತಹಶೀಲ್ದಾರ್ ಪುತ್ತೂರು ರವರಿಗೆ ತಕ್ಷೀರು ನಡೆದ ಸ್ಥಳದ ಮಾಲೀಕತ್ವದ ಬಗ್ಗೆ ವಿವರ ನೀಡುವಂತೆ ಪತ್ರ ನಾನು ಬರೆದಿಲ್ಲ, ಹಾಗೇಯೇ ಸ್ಥಳದ ನಕ್ಷೆಯನ್ನು ಕೂಡಾ ಕೇಳಿಲ್ಲ. ತನ್ನ ತನಿಖಾ ಕಾಲದಲ್ಲಿ ತಹಶೀಲ್ದಾರ್ ಪುತ್ತೂರು ರವರನ್ನು ತಕ್ಷೀರು ನಡೆದಿದೆ ಎನ್ನಲಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಜಾಗವನ್ನು ಪರಿಶೀಲನೆ ಮಾಡಿಸಿಲ್ಲ. ತಕ್ಷೀರು ನಡೆದಿದೆ ಎನ್ನಲಾದ ಸ್ಥಳದಲ್ಲಿ ಮಹಜರು ಕಾಲದಲ್ಲಿ ತೆಗೆದಿದ್ದಾರೆ ಎನ್ನಲಾದ ಬಾವಚಿತ್ರಗಳು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರದಲ್ಲಿ ಕಡತದಲ್ಲಿ ಇದ್ದವು. ತಕ್ಷೀರು ನಡೆದಿದೆ ಎನ್ನಲಾದ ಸಂಬಂಧಿತ ಸಿಸಿ ಟಿವಿ ಫೂಟೇಜ್ ಗಳು ಮತ್ತು ವಿಡಿಯೋಗಳು ಕಡತದಲ್ಲಿ ಇದ್ದ ಬಗ್ಗೆ ನೆನಪಿಲ್ಲ. ನಾನು ಈ ಪ್ರಕರಣದಲ್ಲಿ ಸಮರ್ಪಕವಾದ ತನಿಖೆ ನಡೆಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ದೋಷಾರೋಪಣಾ ಪತ್ರವನ್ನು ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.